ಗಾದೆ ಅರ್ಥವಾಯಿತು.

ನಾಯಿ ಸಮಿತಿ, ಮೂರನೇ ಎರಡು ಬಹುಮತದಿಂದ, ಕಾಲೇಜಿನಲ್ಲಿರುವ ಎಲ್ಲಾ ನಾಯಿಗಳಿಗೆ ಶಸ್ತ್ರಚಿಕಿತ್ಸೆಯಿಂದ ಸಂತಾನಹರಣ ಚಿಕಿತ್ಸೆಯನ್ನು ಮಾಡಿಸಬೇಕು, ಹೀಗೆ ಹೆಚ್ಚುತ್ತಿರುವ ಅವುಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿಡಬೇಕು ಎಂಬ ತೀರ್ಮಾನಕ್ಕೆ ಬಂತು. ನಾಯಿಗಳ ಕೊರಳಿಗೆ ಪಟ್ಟಿಯನ್ನು ಕಟ್ಟಬೇಕು, ಇದರಿಂದ ಹೊರಗಿನ ನಾಯಿಗಳನ್ನು ಕಾಲೇಜಿನಲ್ಲಿ ದೂರದಿಂದಲೇ ಗುರುತಿಸಲು ಸಾಧ್ಯವಾಗುವುದು ಎಂದೂ ತೀರ್ಮಾನಿಸಲಾಯಿತು.

ನಾಯಿಗಳ ಒಂದು ಗೂಢಚಾರ ಪ್ರತಿನಿಧಿ ನಾಯಿ ಸಮಿತಿಯ ಎಲ್ಲಾ ಸಭೆಗಳಲ್ಲಿ, ಸದಸ್ಯರು ಬರುವುದಕ್ಕೆ ಮೊದಲೇ ಕುರ್ಚಿಯ ಕೆಳಗೆ ಬಾಲ ಮುದುರಿ ಕೂರುತ್ತಿತ್ತು; ಇದು ಎಲ್ಲಾ ವರದಿಗಳನ್ನು ನಾಯಿಯ ಮುಖಂಡನಿಗೆ ಕೊಡುತ್ತಿತ್ತು. ಅದು ಮುಖಂಡನಿಗೆ ಈ ತೀರ್ಮಾನವನ್ನು ಹೇಳಿದಾಗ ಮುಖಂಡನ ಕಣ್ಣುಗಳಲ್ಲಿ ಬೆಂಕಿ ಮಳೆಗರೆಯಿತು. ಅದು ಗಟ್ಟಿಯಾಗಿ ಗುರುಗುಟ್ಟುತ್ತಾ ಹಲ್ಲುಗಳನ್ನು ಕಡಿಯಿತು. ಅದು ಸಹ ಕೂಡಲೇ ಒಂದು ಪ್ರತಿನಿಧಿಗಳ ಮಂಡಳಿಯನ್ನು ರಚಿಸಿ, ಒಂದು ನಿವೇದನೆಯನ್ನು ಹೊರಡಿಸಿತು. ಪ್ರತಿನಿಧಿ ಮಂಡಳಿಯ ಸದಸ್ಯನೊಬ್ಬ ಈ ನಿವೇದನೆಯೊಂದಿಗೆ 'ಅನಿಮಲ್ ವೆಲ್‌ಫೇರ್ ಮಿನಿಸ್ಟರ್' ಬಳಿಗೆ ಹೋಗಿ ತನ್ನ ನಿವೇದನಾ-ಪತ್ರವನ್ನು ಅವರಿಗೆ ಕೊಟ್ಟ. ಮಂತ್ರಿಗಳು ಸದಸ್ಯನಿಗೆ, 'ನಿಮ್ಮ ಹಕ್ಕುಗಳನ್ನು ಹತ್ತಿಕ್ಕಲು ಬಿಡುವುದಿಲ್ಲ. ನಿಮಗೆ ನ್ಯಾಯವನ್ನು ಕೊಡಿಸಲು ಸರ್ಕಾರ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುವುದು, ಅಗತ್ಯಬಿದ್ದರೆ 'ನಾಯಿ ರಕ್ಷಣಾ ಅಧಿನಿಯಮ'ವನ್ನು ಸಹ ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದು ಆಶ್ವಾಸನೆಯನ್ನು ಕೊಟ್ಟರು. ನಾಯಿಗಳ ಪ್ರತಿನಿಧಿ ಮಂಡಳಿ ವಿಷಯ ತಿಳಿದು ಸಂತುಷ್ಟಗೊಂಡಿತು. ನಾಯಿಗಳ ಸಭೆಯಲ್ಲಿ ಈ ಬಗ್ಗೆ ಮಾಹಿತಿಯನ್ನು ಕೊಡಲಾಯಿತು. ಆದರೆ ಒಂದು ಯುವ ನಾಯಿ ಅವರ ಈ ಕಾರ್ಯವನ್ನು ಗಾಳಿಗೆ ತೂರುತ್ತಾ ಹೇಳಿತು, "ಈ ಮನುಷ್ಯರ ಆಶ್ವಾಸನೆಯನ್ನು ನೀವು ಇಷ್ಟು ಸುಲಭವಾಗಿ ನಂಬಬಾರದು. ಭಾರತದಲ್ಲಿ ಮಂತ್ರಿಗಳು ಎಂದಿಗೂ ತಮ್ಮ ಆಶ್ವಾಸನೆಯನ್ನು ಈಡೇರಿಸುವುದಿಲ್ಲ."

ನಾಯಿಯ ಮುಖಂಡ ಹೇಳಿದ, "ಮಗನೇ, ನಾನೂ ಸಹ ಎಲ್ಲರ ಮನೆಯ ಅನ್ನವನ್ನು ತಿಂದಿದ್ದೇನೆ. ನಾನು ಸೂಕ್ತ ಆಟವನ್ನು ಆಡಿದ್ದೇನೆ. ಒಂದು ವೇಳೆ ಮಂತ್ರಿಗಳು ತಮ್ಮ ಆಶ್ವಾಸನೆಯನ್ನು ಈಡೇರಿಸದಿದ್ದರೆ, ನಾವು ವಿಶ್ವವಿದ್ಯಾಲಯದ ಎಲ್ಲಾ ನಾಯಿಗಳೊಂದಿಗೆ ಅವರ ಬಂಗ್ಲೆಯನ್ನು ಘೇರಾವ್ ಮಾಡುತ್ತೇವೆ. ನಾನು ಮಂತ್ರಿಗಳ ರಕ್ಷಣೆಗೆ ಹಾಕಿದ ಸುರಕ್ಷಾಕರ್ಮಿಗಳೊಂದಿಗೆ ಮಾತನಾಡಿದ್ದೇನೆ. ಅವರು ನಮಗೆ ಸಹಾಯ ಮಾಡಲು ಸಿದ್ಧರಿದ್ದಾರೆ."

ಮಂತ್ರಿಗಳಿಗೆ ನಾಯಿಗಳ ಆಕ್ರೋಶದ ಪರಿಚಯವಿತ್ತು. ಅವರು ಕೂಡಲೇ ಆ ವಿಶ್ವ ವಿದ್ಯಾಲಯದ ಕುಲಪತಿಗಳಿಗೆ ಪತ್ರವನ್ನು ಬರೆದರು, ಕಾಲೇಜಿನ ಪ್ರಾಂಶುಪಾಲರಿಗೆ ತಮ್ಮ ನಿರ್ಣಯವನ್ನು ಮರಳಿ ಪಡೆಯಲು ಹೇಳಿದರು. ಕುಲಪತಿಗಳು ಮಂತ್ರಿಗಳ ಪತ್ರವನ್ನು ನೋಡಿ ಕಳವಳಗೊಂಡರು. ಅವರ ಬಳಿ ಈ ಮೊದಲೇ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳ ದೀರ್ಘ ಪಟ್ಟಿಯೇ ಇತ್ತು. ಈಗ ಇನ್ನೊಂದು ತಲೆನೋವು ಬಂತು. ಅವರು ಕಾಲೇಜಿನ ಪ್ರಾಂಶುಪಾಲರನ್ನು ಕರೆದು ವಿಷಯವನ್ನೆಲ್ಲಾ ತಿಳಿಸಿದರು. ಕಡೆಗೆ, ಈ ವಿಚಾರದಲ್ಲಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಬಾರದು, ಭಾರತದ ತಿಳಿವಳಿಕಸ್ತ ರಾಜಕಾರಣಿಗಳು ಮೂಲಭೂತ ಸಮಸ್ಯೆಗಳನ್ನು ಕಳೆದ ಏಳು ದಶಕಗಳಿಂದ ಎಳೆದಾಡುತ್ತಲೇ ಇಡುವಲ್ಲಿ ಯಶಸ್ವಿಯಾಗುತ್ತಿರುವಂತೆ ನೀವೂ ಸಹ ಈ ವಿಷಯವನ್ನು ಎಳೆದಾಡುತ್ತಾ ಮುಂದುವರಿಯಬೇಕು ಎಂದು ತಿಳಿಯಪಡಿಸಿದರು. ಪಾಪ, ಪ್ರಾಂಶುಪಾಲರು ಏನು ಮಾಡುತ್ತಾರೆ! ಅವರು ಮನಸ್ಸಿಲ್ಲದ ಮನಸ್ಸಿನಿಂದ ಕುಲಪತಿಗಳ ಮಾತನ್ನು ಒಪ್ಪಿದರು. ಕಾಲೇಜಿಗೆ ಬಂದು ನಾಯಿ ಸಮಿತಿಯನ್ನು ರದ್ದು ಪಡಿಸಿ, ಹೊಸ ನಾಯಿ ಸಮಿತಿಯನ್ನು ರಚಿಸುವ ಬಗ್ಗೆ ಘೋಷಿಸಿದರು. ಹೊಸ ನಾಯಿ ಸಮಿತಿ ಇನ್ನೂ ಕಾರ್ಯವನ್ನು ಸಂಭಾಳಿಸಿಲ್ಲ, ಅದು ಕೆಲಸ ಮಾಡಲು ಆರಂಭಿಸಿದಾಗ, ಹೊಸ ಪರಿಸ್ಥಿತಿಯನ್ನು ನಿಮ್ಮ ಗಮನಕ್ಕೆ ತರಲಾಗುವುದು. ●



